ಎ) ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸಲು ಮಾನ್ಯ ತೋಟಗಾರಿಕೆ ಸಚಿವರು ಆದೇಶ ನೀಡಿದ್ದರೂ ಇನ್ನೂ ಯಾವುದೇ ಅಭಿವೃದ್ಧಿಪಡಿಸದೇ ಇರುವುದಕ್ಕೆ ಕಾರಣಗಳೇನು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) ಮಹಾರಾಷ್ಟ್ರದಲ್ಲಿ ತೋಟಗಾರಿಕೆ ಅಭಿವೃದ್ಧಿಯ ಬಗೆಗಿನ ಮಾಹಿತಿಗಳನ್ನು ಪಡೆದು ಅಧ್ಯಯಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಇಲ್ಲ, ಅಭಿವೃದ್ಧಿ ತೀವ್ರಗತಿಯಿಂದ ನಡೆಯುತ್ತಿದೆ. ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಮಹಾರಾಷ್ಟ್ರದಲ್ಲಿ ರೈತರಿಗೆ ಕೊಡುವ ಸವಲತ್ತುಗಳ ಬಗ್ಗೆ ಇಲಾಖೆಯಲ್ಲಿ ಮಾಹಿತಿಗಳು ಇರುವುದಿಲ್ಲ. ಸದರಿಯವರಿಂದ ಮಾಹಿತಿ ಪಡೆದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

ಋ) 1992–93ನೇ ಸಾಲಿಗೆ ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಎಲ್ಲಾ ಜಿಲ್ಲಾವಲಯ, ರಾಜ್ಯವಲಯ, ಕೇಂದ್ರೀಯ ಮತ್ತು ಕೇಂದ್ರೀಯ ಪುರಸ್ಕೃತ ಯೋಜನೆಗಳಿಂದ ಒಟ್ಟು ರೂ. 52.372 ಲಕ್ಷಗಳನ್ನು ಒದಗಿಸಲಾಗಿದೆ. ಜನವರಿ 93ರ ಅಂತ್ಯದವರೆಗೆ ರೂ. 13.910 ಲಕ್ಷ ಖರ್ಚಾಗಿರುತ್ತದೆ.

ಋೂ) 1992–93ನೇ ಸಾಲಿಗೆ ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ರೂ. 9.29 ಲಕ್ಷ ಒದಗಿಸಲಾಗಿದೆ.

ಎ) ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸಲು ದೇವಾಲಯ ಟ್ರಸ್ಟ್‌ರವರು ಜಮೀನನ್ನು ತೋಟಗಾರಿಕೆ ಇಲಾಖೆಗೆ ಇದುವರೆಗೆ ವರ್ಗಾಯಿಸಿರುವುದಿಲ್ಲವಾದ್ದರಿಂದ ಇನ್ನು ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಲಾಗಿಲ್ಲ.

ರಾಜ್ಯದಲ್ಲಿ ಹತ್ತಿ ಬೆಳೆಗೆ ಯೋಗ್ಯ ಬೆಲೆ ದೊರೆಯದಿದ್ದರಿಂದ ರೈತರಿಗೆ ತೊಂದರೆ.

349 (661): ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಬೆಳೆದ ಹತ್ತಿಗೆ ಯೋಗ್ಯ ಬೆಲೆ ದೊರಕದೆ ಇದ್ದ ಕಾರಣ ಹತ್ತಿಯ ಧಾರಣೆ ಕುಸಿದಿದ್ದು ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ರೈತರು ಬೆಳೆದ ಹತ್ತಿಯನ್ನು ಯೋಗ್ಯ ಬೆಲೆಗೆ ಮಾರಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಇ) ಉತ್ತರ ಕರ್ನಾಟಕದಲ್ಲಿ ಯಾವ ಯಾವ ಎ.ಪಿ.ಎಮ್.ಸಿಯಾರ್ಡ್‌ದಲ್ಲಿ ಎಷ್ಟು ಹತ್ತಿಯು ಮಾರದೇ ಹಾಗೆಯೇ ಉಳಿದಿರುವುದು ?

ಈ) ಸಿಸಿಐದವರು ಬೆಳಗಾವಿ ಜಿಲ್ಲೆ ಬೈಲಹೊಂಗಲ ಎಪಿಎಂಸಿಯಾರ್ಡಿನಲ್ಲಿ ಹಾಗೂ ಕರ್ನಾಟಕ ಫೆಡ್‌ರೇಷನ್‌ರವರು ಹತ್ತಿಯನ್ನು ಖರೀದಿ ಮಾಡದೇ ಇರುವುದರಿಂದ ಹತ್ತಿಯ ಧಾರಣೆ ದಿನ ದಿನಕ್ಕೆ ಇಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ರಾಜ್ಯದಲ್ಲಿ ಸಿಸಿಐದವರು ಹಾಗೂ ಫೆಡರೇಷನ್‌ರವರು ಹತ್ತಿಯನ್ನು ಖರೀದಿ ಮಾಡುವಂತೆ ಮಾಡಲು ಸರ್ಕರದವರು ಕೂಡಲೇ ಕ್ರಮ ಕೈಗೊಳ್ಳುವರೆ ?

ಊ) ಕೃಷಿ ಇಲಾಖೆಯವರು ರೈತರಿಗೆ ಯೋಗ್ಯ ಬೆಲೆ ಬರುವಂತೆ ಮಾಡಲು ಯಾವ ಯಾವ ಕ್ರಮವನ್ನು ಕೈಗೊಂಡಿರುವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ಬಂದಿದೆ.

ಆ) ರೈತರಿಗೆ ಹತ್ತಿಯ ಉತ್ತಮ ಬೆಲೆ ದೊರಕುವ ಸಲುವಾಗಿ ಭಾರತೀಯ ಹತ್ತಿ ನಿಗಮ ಹಾಗೂ ಕೇಂದ್ರ ಸರ್ಕಾರಕ್ಕೆ ತಂತಿ ಸಂದೇಶ ಹಾಗೂ ಪತ್ರಗಳ ಮೂಲಕ ಪ್ರಾರ್ಥಿಸಿ ಹೆಚ್ಚು ಹತ್ತಿಯನ್ನು ಕೊಂಡುಕೊಳ್ಳಲು ಕೋರಲಾಗಿದೆ, ಹಾಗೂ ಭಾರತೀಯ ಹತ್ತಿ ನಿಗಮ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಹಾಗೂ ನೂಲು ಗಿರಣಿಯ ಮಹಾಮಂಡಳಿ ಇವರೊಂದಿಗೆ ಚರ್ಚಿಸಿ ಅಧಿಕ ಹತ್ತಿಯನ್ನು ಖರೀದಿಸಲು ಒತ್ತಾಯಪೂರ್ವಕವಾಗಿ ಕೋರಲಾಯಿತು. ಇದಲ್ಲದೆ, ಮಾನ್ಯ ಕೃಷಿಮಂತ್ರಿಗಳು, ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳೊಡನೆ ವಿಷಯವನ್ನು ಪ್ರಸ್ತಾಪಿಸಿ ಕೇಂದ್ರ ಸರ್ಕಾರವು ಹೆಚ್ಚಿನ ರೀತಿಯಲ್ಲಿ ಹತ್ತಿಯನ್ನು ಖರೀದಿಸಲು ಕೋರಲಾಯಿತು. ಭಾರತೀಯ ಹತ್ತಿ ನಿಗಮವು ಕರ್ನಾಟಕದಲ್ಲಿ ಹೆಚ್ಚು ಹತ್ತಿಯನ್ನು ಖರೀದಿಸಲಾಗುವುದು ಎಂದು ತಿಳಿಸಿದೆ.

ಇ) ಉತ್ತರ ಕರ್ನಾಟಕದ ಮಾರುಕಟ್ಟೆಗಳಲ್ಲಿ ದಿನಾಂಕ: 31–1–93ರ ವಾರದಲ್ಲೂ ಹಳಿಯಾಳದಲ್ಲಿ 2033 ಕ್ವಿಂಟಾಲ್, ನರಗುಂದ 5000 ಕ್ವಿಂಟಾಲ್, ರಾಣೆಬೆನ್ನೂರು 2614 ಕ್ವಿಂಟಾಲ್, ಹುಬ್ಬಳ್ಳಿ 8234 ಕ್ವಿಂಟಾಲ್, ಬಾಗಲಕೋಟೆ 115 ಕ್ವಿಂಟಾಲ್, ಬಿಜಾಪುರ 7258 ಕ್ವಿಂಟಾಲ್, ಬೈಲ ಹೊಂಗಲ, 17100 ಕ್ವಿಂಟಾಲ್ ಹಾಗೂ ಸವದತ್ತಿ ಮಾರುಕಟ್ಟೆಯಲ್ಲಿ 34497 ಕ್ವಿಂಟಾಲ್ ಒಟ್ಟು 76851 ಕ್ವಿಂಟಾಲ್ ಹತ್ತಿಯು ವಾರಾಂತ್ಯದಲ್ಲಿ ಉಳಿದಿರುತ್ತದೆ. (31–1–93ರವರೆಗೆ). ಆದರೆ ಎಲ್ಲಾ ಮಾರುಕಟ್ಟೆಗಳಲ್ಲಿ ಪ್ರತಿವಾರ ಟೆಂಡರದಲ್ಲಿ ಹತ್ತಿಯ ಮಾರಾಟ ನಡೆಯುತ್ತಿರುತ್ತದೆ.

ಈ) ಇಲ್ಲ. ಸಿಸಿಐದವರು ಬೈಲಹೊಂಗಲ ಮಾರುಕಟ್ಟೆಯಲ್ಲಿ 13–2–93ರವರೆಗೆ ಒಟ್ಟು 17253 ಕ್ವಿಂಟಾಲ್‌ದಷ್ಟು ಹತ್ತಿಯನ್ನು ಖರೀದಿ ಮಾಡಿರುತ್ತಾರೆ. ಗರಿಷ್ಟ ಬೆಲೆ ರೂ. 1510 ಕನಿಷ್ಠ ದರ 950 ರೂ.ಗಳಾಗಿರುತ್ತದೆ. ಸಿಸಿಐದವರು ಹತ್ತಿ ಬೆಲೆಯು ಕುಸಿಯುವುದನ್ನು ತಡೆಯಲು ಹತ್ತಿ ಖರೀದಿಯನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಇನ್ನು ಹೆಚ್ಚು ಖರೀದಿಸಲು ಒತ್ತಾಯಿಸಲಾಗುತ್ತಿದೆ.

ಉ) ಈ ಬಗ್ಗೆ ಸೂಕ್ತವಾದ ಕ್ರಮ ನಡೆದಿದೆ.

ಊ) 1. ರಾಜ್ಯದಲ್ಲಿ ಹತ್ತಿಯ ಗುಣಮಟ್ಟವನ್ನು ಪರೀಕ್ಷಿಸಲು ರೈತರು ಬೆಳೆದ ಹತ್ತಿಗೆ ಒಳ್ಳೆಯ ಬೆಲೆ ಬರುವಂತೆ ಮಾಡಲು 4 ಹತ್ತಿ ವರ್ಗೀಕರಣ ಕೇಂದ್ರಗಳನ್ನು ಸೌಂದತ್ತಿ, ಹುಬ್ಬಳ್ಳಿ, ಬಳ್ಳಾರಿ ಮತ್ತು ರಾಯಚೂರಿನಲ್ಲಿ ಈಗಾಗಲೇ ಸ್ಥಾಪಿಸಿ ಕಾರ್ಯ ನಿರ್ವಹಿಸುತ್ತಿವೆ.
2. ಭಾರತೀಯ ಹತ್ತಿ ನಿಗಮ, ಕರ್ನಾಟಕ ರಾಜ್ಯ ಮಹಾಮಂಡಳಿ ಹಾಗೂ ಕರ್ನಾಟಕ ರಾಜ್ಯ ನೂಲು ಗಿರಣಿಗಳ ಮಹಾಮಂಡಲದವರನ್ನು ರಾಜ್ಯದಲ್ಲಿ ಬೆಳೆದ ಹತ್ತಿಯನ್ನು ಹೆಚ್ಚಾಗಿ ಖರೀದಿ ಮಾಡಲು ಒತ್ತಾಯಿಸಲಾಗುತ್ತಿದೆ.